

# ಟುರ್ ಟುಕ್ ಎಂಬ ಗಡಿನಾಡು

■ ಚಿತ್ರ– ಲೇಖನ:
**ಹೇಮಮಾಲಾ, ಬಿ.**

ಿಮಾಲಯದ ಸೆರಗಿನಲ್ಲಿ, ವರ್ಷದಲ್ಲಿ ಆರು ತಿಂಗಳಿಗೂ ಹೆಚ್ಚಿನ ಕಾಲ ಹಿಮಚ್ಛಾದಿತವಾಗಿರುವ ದುರ್ಗಮವಾದ ಪ್ರದೇಶ ಲಡಾಕ್. ಲಡಾಕಿನ ಪ್ರಮುಖ ನಗರಗಳಲ್ಲೊಂದಾದ ಲೇಹ್ ನಿಂದ ಸುಮಾರು 205 ಕಿ.ಮೀ ಪ್ರಯಾಣಿಸಿದಾಗ 'ನುಬ್ರಾ ಕಣಿವೆ' ಎಂಬ ಸುಂದರ ಪ್ರವಾಸಿತಾಣ ಲಭಿಸುತ್ತದೆ.

ಈ ದಾರಿಯುದ್ದಕ್ಕೂ ಪ್ರಕೃತಿ ಸೌಂದರ್ಯ ಅನುಪಮ. ಲೇಹ್‌ನಿಂದ ನುಬ್ರಾ ಕಣಿವೆಗೆ ಹೋಗುವ ದಾರಿಯಲ್ಲಿ, 'ಕರ್ದೂಂಗ್ಲಾ ಪಾಸ್' ಎಂಬ ಜಗತ್ತಿನ ಅತ್ಯಂತ ಎತ್ತರದ ವಾಹನ ಸಂಚಾರಿ ರಸ್ತೆಯಲ್ಲಿ ಕ್ರಮಿಸಬೇಕು. ಯಾವಾಗ ಹಿಮ ಬೀಳುತ್ತದೆ, ಮಳೆ ಸುರಿಯುತ್ತದೆ, ಚಳಿಗಾಳಿ ಬೀಸುತ್ತದೆ, ಸುಡುಬಿಸಿಲು ರಾಚುತ್ತದೆ ಎಂದು ಅಂದಾಜಿಸಲಾಗದು. ಮಳೆ ಬಂದಾಗ ಎತ್ತರದ ಬೆಟ್ಟಗಳಿಂದ ಬಂಡೆಗಳು ಉರುಳಿ ಬೀಳುತ್ತವೆ. ಒಟ್ಟಿನಲ್ಲಿ ಸದಾ ಅಪಾಯದ ನೆರಳಿನಲ್ಲಿರುವ ಜಾಗವಿದು.

ಈ ಪ್ರದೇಶದಲ್ಲಿ ಸೈನಿಕರು ಓಡಾಡುತ್ತಿರುತ್ತಾರೆ. ಒಂದು ಕೆಫೆ ಇದೆ. ಮಿಕ್ಕಂತೆ ಪ್ರಕೃತಿಯದೇ ರಾಜ್ಯಭಾರ. ನಮ್ಮ ಅಕ್ಕಪಕ್ಕ ಮೋಡಗಳು ಓಡಾಡುತ್ತಿರುವ ಅನುಭವ ಕೊಡುವ ಕರ್ದೂಂಗ್ಲಾ ಪಾಸ್‌ನಲ್ಲಿ ಸ್ವಲ್ಪ ಸಮಯ ಕಳೆಯುವುದು ರೋಮಾಂಚನವನ್ನು ಉಂಟುಮಾಡುತ್ತದೆ. ಕರ್ದೂಂಗ್ಲಾ ಪಾಸ್ ಅನ್ನು ಹತ್ತಿ ಇಳಿದು ಬೆಟ್ಟಗಳ ಶ್ರೇಣಿಯ ಇನ್ನೊಂದು ಮಗ್ಗುಲಿನ ಕಡೆಗೆ ಪ್ರಯಾಣಿಸಿದಾಗ 'ನುಬ್ರಾ ಕಣಿವೆ' ಸಿಗುತ್ತದೆ. ಕಣಿವೆಯುದ್ದಕ್ಕೂ ನೂರಾರು ಬೆಟ್ಟಗಳು, ಅಲ್ಲಲ್ಲಿ ಕಾಣಸಿಗುವ ಪುಟ್ಟ ಹಳ್ಳಿಗಳು, ಗೋಧಿ, ಬಾರ್ಲಿ, ಸಾಸಿವೆ ಬೆಳೆದಿದ್ದ ಹೊಲಗಳು, ಮೇಯುತ್ತಿರುವ ಯಾಕ್ ಮೃಗಗಳು , ಚಿಕ್ಕ ದೊಡ್ಡ ಸ್ತೂಪಗಳು, ಬೀಸಿ ಬರುವ ತಂಗಾಳಿಗೆ ಪಟಪಟನೇ ಬಡಿಯುವ ಬೌದ್ಧ ಧರ್ಮದ ಪತಾಕೆಗಳು, ಬೈಕ್‌ನಲ್ಲಿ ತಮ್ಮ ಸರಂಜಾಮುಗಳನ್ನು ಹೇರಿಕೊಂಡು ಸಾಹಸಯಾನ ಮಾಡುವ ಯುವಕ ಯುವತಿಯರು, ಹಿಮಾಚ್ಛಾದಿತ ಗಿರಿಕಂದರಗಳ ನಡುವೆ ಶಾಂತವಾಗಿ ಹರಿಯುತ್ತಿದ್ದ ಶಾಯಕ್ ನದಿ– ಇವನ್ನೆಲ್ಲಾ ಕಣ್ತುಂಬಿಸಿ ಕ್ಯಾಮೆರಾದಲ್ಲಿ ಸೆರೆ ಹಿಡಿಯುತ್ತಾ ಸುಮಾರು ನಾಲ್ಕು ಗಂಟೆಗಳ ಕಾಲ ಪ್ರಯಾಣಿಸಿದಾಗ ಈ ಭಾಗದಲ್ಲಿರುವ ಭಾರತದ ಕೊನೆಯ ಹಳ್ಳಿಯಾದ



